ಶ್ರೀ ಎಂ. ವೈ. ಪಾಟೀಲ್.—ಮಾನ್ಯ ಅಧ್ಯಕ್ಷರೇ, ನನ್ನ (೫) ಪ್ರಶ್ನೆಗೆ ಉತ್ತರವಾಗಿ ಮಾನ್ಯ ಸಚಿವರು "ಘತ್ತರಗಾ ಹಾಗೂ ಚಿನ್ನಮಳ್ಳಿ ದೇವಸ್ಥಾನಗಳ ಕಲ್ಯಾಣ ಮಂಟಪಗಳಿಗೆ ಹಣ ಒದಗಿಸ ಬೇಕೆಂಬ ಕೋರಿಕೆಗಳು ಬಹಳ ತಡವಾಗಿ ಬಂದಿರುವುದರಿಂದ ಕಳೆದ ವರ್ಷದಲ್ಲಿ ಹಣ ಒದಗಿಸಲು ಸಾಧ್ಯ ವಾಗಿಲ್ಲ" ಎಂದು ಹೇಳಿದ್ದಾರೆ. ಕರ್ನಾಟಕ ಭೂಪಟದಲ್ಲಿ ಕಲ್ಬುರ್ಗಿ ಎನ್ನುವ ಒಂದು ಜಿಲ್ಲೆ ಇರುವು ದೆಂದು ಮಾನ್ಯ ಸಚಿವರಿಗೆ ತಿಳಿದಿದೆಯೋ ಏನೋ ! ಕಲ್ಯಾಣ ಮಂಟಪಗಳಿಗೆ ಹಣ ಒದಗಿಸಬೇಕೆಂಬ ಕೋರಿಕೆ ಕಲ್ಬುರ್ಗಿ ಜಿಲ್ಲೆಯಿಂದ ಸರಕಾಲಕ್ಕೆ ಬಂದಿರಲಿಲ್ಲವೇ?

ಶ್ರೀ ಸುಧೀಂದ್ರರಾವ್ ಕಸಬೆ.—ಗುಲ್ಬರ್ಗ ಜಿಲ್ಲೆಯ ಯಾವುದೇ ಅರ್ಜಿಗಳು ಸರಕಾಲಕ್ಕೆ ಬಂದಿಲ್ಲದೆ ಇರುವುದರಿಂದ, ಆ ಜಿಲ್ಲೆಗೆ ಹಣ ಸಹಾಯವನ್ನು ಮಾಡಿಲ್ಲ.

ಶ್ರೀ ಎಂ. ವೈ ಪಾಟೀಲ್.—ಬೇರೆ ಜಿಲ್ಲೆಗಳಿಗೆ ಹಣ ಒದಗಿಸಿದ ಆಥವಾ ಮಂಜೂರು ಮಾಡಿದ ದಿನಾಂಕ ಯಾವುದು? ಮತ್ತು ಆ ದಿನಾಂಕದೊಳಗೆ ಕಲ್ಬುರ್ಗಿ ಜಿಲ್ಲೆಯಿಂದ ಕೋರಿಕೆ ಬಂದಿರಲಿಲ್ಲವೇ? ಏಕೆಂದರೆ, ನಾವು ಸರಕಾಲದಲ್ಲಿ ಕೋರಿಕೆಯನ್ನು ಸಲ್ಲಿಸಿದ್ದೆವು.

ಶ್ರೀ ಸುಧೇಂದ್ರರಾವ್ ಕಸಬೆ.—ಹಾಗಿದ್ದರೆ, ನಿಮ್ಮ ವಿಚಾರಗಳನ್ನು ನನ್ನ ಗಮನಕ್ಕೆ ತನ್ನಿ, ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

Management of Chamundeshwari Temple at Mysore

211 SRI H. GANGADHARAN (Krishnaraja).—Will the Minister of State for Marketing and Muzrai be pleased to state.—

(a) whether the Government has taken the management of Sri Chamundeshwari Temple from the Palace, Mysore?

if so, what are the terms and conditions ?

SRI SUDHENDRA KASABE (Minister of State for Marketing and Muzrai).—

(a) Yes.

The terms and conditions subject to which Sri Chamundeshwari Temple has been taken over are as under :

(i) The cost of Establishment of one Sheristedar, two Clerks and two peons, is to be met by Government and the institution should contribute to the Establishment Fund at the rate as other major institutions contributes (namely at 8%).

(ii) Government reserve the right of reviewing from time to time the tasdik allowance grant to the institution. The palace will, however, continue to manage the institution as at present as Provided for in the Muzrai Manual.

(iii) The earlier decision that these decisions are recognised as private property of His Highness the Maharaja of Mysore should be deemed to have been modified.

ಶ್ರೀ ಹೆಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಯನ್ನು ಚರ್ಚೆಗೆ ತೆಗೆದುಕೊಳ್ಳ ಬೇಕೆಂದು ಪ್ರಾರ್ಥನೆ.

ಅಧ್ಯಕ್ಷರು.—ತಾವು ತಡವಾಗಿ ಬಂದಿದ್ದೀರಿ. ತಮ್ಮ ಪ್ರಶ್ನೆಯನ್ನು ಚರ್ಚೆಗೆ ತೆಗೆದುಕೊಂಡಾಗ ತಾವು ಬಂದಿರಲಿಲ್ಲ. ಈಗ ತಮ್ಮ ಪ್ರಶ್ನೆಯನ್ನು ಕೇಳಬಹುದು.

ಶ್ರೀ ಹೆಚ್. ಗಂಗಾಧರನ್—ಮಾನ್ಯ ಅಧ್ಯಕ್ಷರೇ, ಶ್ರೀ ಚಾಮುಂಡೇಶ್ವರಿ ದೇವಸ್ಥಾನವನ್ನು ಸರ್ಕಾರ ವಹಿಸಿಕೊಂಡಿದೆ ಎಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಹಾಗಾದರೆ, ದೇವಸ್ಥಾನದ ಒಟ್ಟು ಆದಾಯ ವೆಷ್ಟು? ಮತ್ತು ಅಲ್ಲಿನ ಸಿಬ್ಬಂದಿಗೆ ಸಂಬಳವನ್ನು ಯಾವ ಆಧಾರದ ಮೇಲೆ ನಿಗದಿ ಮಾಡಲಾಗಿದೆ?

ಶ್ರೀ ಸುಧೀಂದ್ರರಾವ್ ಕಸಬೆ—ಶ್ರೀ ಚಾಮುಂಡೇಶ್ವರಿ ದೇವಸ್ಥಾನವನ್ನು ಸರ್ಕಾರ ವಹಿಸಿ ಕೊಂಡಿದೆ. ಸಂಸ್ಥೆಗೆ ಕೊಡುವ ತಸ್ದಿಕ್ ಭತ್ಯ ಅನುದಾನವನ್ನು ಕಾಲಕಾಲಕ್ಕೆ ಪುನರ್‌ಪರಿಶೀಲಿಸುವ ಅಧಿಕಾರವನ್ನು ಸರ್ಕಾರವೇ ಇಟ್ಟುಕೊಂಡಿದೆ, ಆದಾಗ್ಯೂ. ಈಗಿರುವಂತೆ ಅರಮನೆಯವರು ಸಂಸ್ಥೆ ಯನ್ನು ಮುಜರಾಯಿ ಕೈಪಿಡಿಯಲ್ಲಿ ಕಲ್ಪಿಸಿರುವ ಅವಕಾಶಗಳ ಮೇರೆಗೆ ನಡೆಸಿಕೊಂಡು ಹೋಗುವರು.

ಶ್ರೀ ಹೆಚ್. ಗಂಗಾಧರನ್.—ದೇವಸ್ಥಾನಕ್ಕೆ ಹೆಚ್ಚಿನ ಉತ್ಪತ್ತಿ ಇದ್ದರೂ ಅಲ್ಲಿನ ಸಿಬ್ಬಂದಿಗೆ ಸರಿಯಾದ ಸಂಬಳದ ವ್ಯವಸ್ಥೆ ಮಾಡಿಲ್ಲ. ಆದುದರಿಂದ, ಇತರ ಮುಜರಾಯಿ ದೇವಸ್ಥಾನದ ಸಿಬ್ಬಂದಿ ಗಳಿಗೆ ನಿಗದಿ ಮಾಡಿರುವ ಸಂಬಳವನ್ನು ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಸಿಬ್ಬಂದಿಗಳಿಗೂ ಕೊಡುವ ವ್ಯವಸ್ಥೆ ಮಾಡಲಾಗುವುದೆ?

ಶ್ರೀ ಸುಧೀಂದ್ರರಾವ್ ಕಸಬೆ.—ಪರಿಶೀಲಿಸುತ್ತೇನೆ.

ಶ್ರೀ ಡಿ. ಜಯದೇವರಾಜ ಅರಸ್.—ದೇವಸ್ಥಾನವನ್ನು ಅರಮನೆಯ ವಶದಿಂದ ಮುಜರಾಯಿ ಇಲಾಖೆಯ ವಶಕ್ಕೆ ತೆಗೆದುಕೊಂಡಾಗ, ದೇವಸ್ಥಾನದ ಎಲ್ಲಾ ಆಸ್ತಿಗಳನ್ನೂ ಇಲಾಖೆಯವರು ವಹಿಸಿ ಕೊಂಡಿರುವರೆ?

ಶ್ರೀ ಸುಧೀಂದ್ರರಾವ್ ಕಸಬೆ.—ಇದನ್ನು ಗಮನದಲ್ಲಿಟ್ಟುಕೊಂಡು ಪರಿಶೀಲಿಸುತ್ತೇನೆ.

ಶ್ರೀ ಡಿ. ಜಯದೇವರಾಜ ಅರಸ್.—ದೇವಸ್ಥಾನವನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಾಗ ಒಂದು ಟ್ರಸ್ಟ್ ಮಾಡಿದ್ದರು ಮತ್ತು ಆ ಟ್ರಸ್ಟಿಗೆ ಉತ್ಪತ್ತಿಗೂ ಅವಕಾಶ ಮಾಡಿದ್ದರು. ಆದ್ದರಿಂದ, ಸರ್ಕಾರದ ವಶಕ್ಕೆ ತೆಗೆದುಕೊಂಡಾಗ ಉತ್ಪತ್ತಿಯ ಮೂಲಗಳನ್ನು ಸಂಪೂರ್ಣವಾಗಿ ತೆಗೆದುಕೊಳ್ಳ ಲಾಯಿತೆ? ಅಥವಾ ಯಾವುದು ಬೇಕೋ ಅದನ್ನು ಮಾತ್ರ ತೆಗೆದುಕೊಳ್ಳಲಾಗಿದೆಯೆ? ಒಂದು ವೇಳೆ ಪೂರ್ತ ತೆಗೆದುಕೊಳ್ಳದಿದ್ದರೆ, ತೆಗೆದು ಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಸುಧೀಂದ್ರರಾವ್ ಕಸಬೆ.—ಪರಿಶೀಲಿಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ವಿಷಯ ಗೊತ್ತಿಲ್ಲದೆ ಉತ್ತರ ಕೊಡುತ್ತಿರುವುದರಿಂದ ರಾಜೀನಾಮೆ ಕೊಡುವ ವಿಚಾರವನ್ನು ಪರಿಶೀಲಿಸುವರೆ ?! (ನಗು)

ಶ್ರೀ ಹೆಚ್ ಗಂಗಾಧರನ್.—ಮಾನ್ಯ ಅಧ್ಯಕ್ಷರೇ, ಇದು ಬಹಳ ಗಹನವಾದ ವಿಚಾರ. ಇದು ನೂರಾರು ಜನರ ಜೀವನದ ಪ್ರಶ್ನೆ. ಹಿಂದೆ ದೇವಸ್ಥಾನ ಅರಮನೆಯ ವಶದಲ್ಲಿದ್ದಾಗ ದೇವಸ್ಥಾನದ ಸಿಬ್ಬಂದಿಗೆ ಜೀವನ ಮಾಡಲು ಅನುಕೂಲವಾಗುವಂತೆ ದೇವಸ್ಥಾನದ ವತಿಯಿಂದ ಜಮೀನು ಕೊಟ್ಟಿದ್ದರು ಮತ್ತು ಹಬ್ಬಗಳಲ್ಲಿ ದವಸಧಾನ್ಯವನ್ನೂ ಸಹ ಕೊಡುತ್ತಿದ್ದರು. ಆದರೆ, ಈಗ ಅದನ್ನು ಸರ್ಕಾರ ವಹಿಸಿ ಕೊಂಡ ಮೇಲೆ ಅಲ್ಲಿನ ಸಿಬ್ಬಂದಿಗೆ ಆರೇಳು ರೂಪಾಯಿ ಸಂಬಳ ಕೊಡುವ ವ್ಯವಸ್ಥೆ ಇದೆ. ಅಲ್ಲದೆ, ಕಾಣಿಕೆ ರೂಪದಲ್ಲಿ ಬರುವ ಹಣವನ್ನು ಅಲ್ಲಿರುವ ಡಬ್ಬಿಗೆ ಹಾಕಬೇಕೆಂದು ಕಾನೂನು ಮಾಡಿದ್ದಾರೆ. ಈಗ ದೇವಸ್ಥಾನಕ್ಕೆ ಹೆಚ್ಚಿನ ಆದಾಯವಿದೆ. ಆದುದರಿಂದ, ಅಲ್ಲಿನ ಅರ್ಚಕರು ಮತ್ತು ಇತರ ಸಿಬ್ಬಂದಿ ವರ್ಗದವರು ಸರಿಯಾದ ಜೀವನ ನಡೆಸಲು ವ್ಯವಸ್ಥೆ ಮಾಡುವರೆ?

ಶ್ರೀ ಆರ್. ಗುಂಡೂರಾವ್.—ಸರ್ಕಾರ ಖಂಡಿತವಾಗಿಯೂ ಮಾಡುತ್ತದೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯೊಂದನ್ನು ನೀಡುವರು.